ಕವಿತೆ



ಸುಬ್ಬು ಹೊಲೆಯಾರ್

ಕಲೆ: ವಿಶ್ವನಾಥ್ ಎ.ಎಸ್.



# ಬಚ್ಚಿಟ್ಟುಕೊಳ್ಳುವುದಿಲ್ಲ ಬೆರಳುಗಳನ್ನು...

ಸುಮ್ಮನಿದ್ದೇನೆ
ಹೇಳಿದ್ದೇನೆ ಸುಮ್ಮನಿರಲು,
ನನ್ನ ಉಸಿರಿಗೂ ಸದ್ದು ಮಾಡಬೇಡ ಎಂದು.
ಸುಮ್ಮನಿರಲು ಬಿಡುತ್ತಿಲ್ಲ ಇವರು.
ನಾಲಿಗೆ ತುದಿ ಹಿಡಿದಿದ್ದಾರೆ,
ಕೈಕಾಲು ಆಡಿಸುವಂತಿಲ್ಲ
ಸಹಜ ಉಸಿರಾಡಲು ಕೂಡ.

ಕೆಮ್ಮಿದ್ದಕ್ಕೆ ನನ್ನಪ್ಪನ್ನ ಕೆನ್ನೆಗೆ ಹೊಡೆದು
ಬಾಯಿ ಮುಚ್ಚಿಸಿದ್ದರೂ,
ಈಗ ಸನ್ನೆ ಮಾಡುತ್ತಿದ್ದಾರೆ
ನನಗೆ ಮೂಗು ಬಾಯಿ ಮುಚ್ಚಲು

ಗದರಿಸುತ್ತಾರೆ
ಅಪ್ಪಣೆ ಇಲ್ಲದೆ ಹಾಗೆಲ್ಲ
ಕಣ್ಣು ಬಿಟ್ಟು ನೋಡಬೇಡ
ನಿನ್ನ ರೆಪ್ಪೆಗಳು ನಮ್ಮ ಅಣಕಿಸುತ್ತವೆ
ಬಿದ್ದಿರಬೇಕು, ನೆಲದ ಧೂಳಾಗಿ
ಕಟ್ಟಪ್ಪಣೆ ಧರ್ಮಿಷ್ಠರದು

ಕಲಿತೆನೆಂದು ಹಿಡಿದು
ಕತ್ತರಿಸಿದ್ದರು ಹೆಬ್ಬೆರಳನ್ನ,
ಬರೆಯಿಸುತ್ತಿದ್ದಾರೆ ಭೀಮ ಸಾಹೇಬರು
ಅಕ್ಷರ, ಕಾವ್ಯ, ಚರಿತ್ರೆ ಎಲ್ಲವನ್ನು.

ತಣ್ಣಗೆ ಕುದಿಯುತ್ತಿದ್ದಾರೆ
ಹುಡುಕಿಸುತ್ತಿದ್ದಾರೆ, ಕವಿತೆಗಳನ್ನು
ಬೆರಳುಗಳನ್ನು ಬಂಧಿಸಲು

ಬಚ್ಚಿಟ್ಟುಕೊಳ್ಳುವುದಿಲ್ಲ ಬೆರಳುಗಳನ್ನ
ಮುಷ್ಠಿ ಹಿಡಿದು 'ಜೈ ಭೀಮ್'
ಕೂಗಿ ಗಾಳಿಯಲ್ಲಿ ಗುದ್ದಿದ್ದೇನೆ ಆಕಾಶಕ್ಕೆ
ಇನ್ನಷ್ಟು ಮೇಲಕ್ಕೆ ಜಿಗಿಯಲೆಂದು.

ನಡೆಯುತ್ತೀಯ ಎದೆ ಉಬ್ಬಿಸಿಕೊಂಡು
ಮೀಸಲಾತಿಯ ಕೊಬ್ಬಿನಿಂದ.
ಆಡಿದರೆ ನಮ್ಮ ಬಗ್ಗೆ
ಕೊಂದು ಹಾಕುತ್ತೇವೆ. ನಿನ್ನ ನುಡಿಯನ್ನ.
ನೆಡೆಗೆಟ್ಟವರಿಗೆ ಏನೆನ್ನಲಿ ಬಸವಣ್ಣ

ಹೇಳಲಾದೀತೆ ಬೀಸುವ ಗಾಳಿಗೆ
ಉಸಿರಾಡಿಸಬೇಡ, ಊರಾಚೆಯ ಜನರಿಗೆಂದು
ನೀರ ಮುಟ್ಟಿದ್ದಕ್ಕೆ ಕೆಂಡಮಂಡಲರಾಗಿ
ಉರಿದು ಹೋದಿರಿ...

ಆದರೂ ನಾನು ಸುಮ್ಮನಿದ್ದೇನೆ
ಈ ನೆಲ ಹೇಳಿದೆ,
ಸುಮ್ಮನಿದ್ದು ಬಿಡು ನನ್ನ ಹಾಗೆ.